ಮಾಡಿದಾಕ್ಷಣ ನೀನು ಗಣೇಶನನ್ನು ದೇವರೆಂದು ಒಪ್ಪಿಕೊಂಡಂತೇನೂ ಆಗುವುದಿಲ್ಲವಲ್ಲ? ನಂಬುವವರು ನಾವು ತಾನೆ? ನೀನು ಮೂರ್ತಿಯನ್ನು ಮಾಡಿಕೊಡುವವನಷ್ಟೇ! ಮೂರ್ತಿ ಮಾಡಿಕೊಡುವುದು ನಿನ್ನ ಕುಲ ಕಸುಬು, ಅಷ್ಟೇ. ನಿನ್ನ ಜೀವನವನ್ನು ಸುಧಾರಿಸಿಕೊಳ್ಳುವ ಈ ಅವಕಾಶವನ್ನು ಕಳೆದುಕೊಳ್ಳಬೇಡ ಮಾರಾಯ!''

ಕೆಲವು ಸಮಯ ಅವರ ಮಧ್ಯೆ ಅಸಹನೀಯ ಕಹಿ ಮೌನ ಕವುಚಿಕೊಂಡಿತು.

''ನೋಡು ಬತ್ತು ಮಾಮ... ನಮ್ಮ ಪೇಟೆ ಬೀದಿಯಲ್ಲಿ ಹೂವು ಮಾರುವವಳೊಬ್ಬಳಿದ್ದಾಳೆ. ಹೂಗಳನ್ನು ಮಾರಿಯೇ ಒಂದು ಬಂಗಲೆಯನ್ನು ಕಟ್ಟಿಕೊಂಡಿದ್ದಾಳೆ! ತಾನು ಕಟ್ಟಿ ಮಾರುವ ಹೂಗಳು ಇಗರ್ಜಿ ಅಥವಾ ಮಂದಿರಗಳಲ್ಲಿ ಯಾವುದನ್ನು ಅಲಂಕರಿಸುತ್ತವೆ ಎಂಬುದು ಅವಳಿಗೆ ಗೊತ್ತಿಲ್ಲ! ಹಾಗಂತ ಹೂಗಳನ್ನು ಕಟ್ಟಿ ಮಾರುವ ಕೆಲಸವನ್ನು ಅವಳು ನಿಲ್ಲಿಸಿಲ್ಲ. ಅವಳ ಕಾಯಕವನ್ನು ಅವಳು ಮಾಡುತ್ತಲೇ ಇದ್ದಾಳೆ. ನೀನೂ ಅಷ್ಟೇ. ನಿನ್ನ ಕಸುಬನ್ನು ನೀನು ಮಾಡು. ಬಾಕಿ ವಿಚಾರಗಳನ್ನು ತಲೆಗೆ ಹಚ್ಚಿಕೊಳ್ಳಬೇಡ. ನಿನಗೆ ಒಳ್ಳೆಯದಾಗುತ್ತದೆ.''

ಬವ್ತೀಸನಿಗೆ ಸುಧಾಕರನ ತರ್ಕ ಸರಿ ಎನಿಸಿತು. ಅವನ ಹಿಂದಿನ ಜೀವನ ಅವನ ಮುಂದೆ ಹಾದು ಮರೆಯಾಯಿತು. ಮುಂದಿನ ಅಸ್ಪಷ್ಟ ಜೀವನದ ಚಿತ್ರ ಭೀಕರವಾಗಿ ಎದುರು ಕಾಣಿಸತೊಡಗಿತು. ಇನ್ನೂ ಓದುತ್ತಿರುವ ಮಕ್ಕಳು... ಇಗರ್ಜಿಯ ಗುರುಗಳು ವ್ಯಂಗ್ಯದಿಂದ ಸೂಚಿಸಿದ ಸರಕಾರಿ ಸ್ಕೂಲು... ಸುಧಾಕರನ ಅಂಗಡಿ, ಮತ್ತಿತರರ ಸಾಲ...

ತಲೆ ಕೊಡವಿಕೊಂಡು ಅವನು ಎರಡೂ ಕಣ್ಣುಗಳನ್ನು ಮುಚ್ಚಿಕೊಂಡ. ಕಣ್ಣುಗಳೊಳಗೆ ಕತ್ತಲು ತುಂಬಿಕೊಂಡಿತು. ಅದೇ ಕಗ್ಗತ್ತಲಿನಲ್ಲಿ ಅವನು ತನ್ನ ಹೃದಯವನ್ನು ತೆರೆದುಕೊಂಡ. ತೆರೆದ ಹೃದಯದೊಳಗೆ ಅಸ್ಪಷ್ಟ ಬೆಳಕಿನ ಕಿರಣಗಳು ಮೂಡತೊಡಗಿ ಅವನಲ್ಲಿ ಹೊಸ ಚೈತನ್ಯ ಹೊರಹೊಮ್ಮತೊಡಗಿದಂತೆ ಭಾಸವಾಯಿತು. ಆ ಚೈತನ್ಯದೊಳಗೆ ಯಾವುದೇ ದೇವರಿರಲಿಲ್ಲ, ಯಾವುದೋ ಅಜ್ಞಾತ ಶಕ್ತಿಯಷ್ಟೇ...

ಅವನು ಬದುಕಿ ಬಂದಿದ್ದ ಹಾದಿಯ ಕೊನೆಯಲ್ಲಿ ಹೊಸ ಬೆಳಕು ಕಾಣತೊಡಗಿತು. ಅವನು ಮುಚ್ಚಿದ್ದ ಕಣ್ಣುಗಳನ್ನು ತೆರೆದ.

''ಸುಧಾಕರ...'' ಮೌನವನ್ನು ಮುರಿದು ಅವನು ಹೇಳಿದ, ''ನಿನ್ನ ಗಣಪತಿ ದೇವರ ಫೋಟೊ ನನಗೆ ಕೊಡು. ಅವನ ಮೂರ್ತಿಯನ್ನು ಮಾಡಲು ಪ್ರಯತ್ನಿಸುತ್ತೇನೆ.''

''ಬತ್ತೂ ಮಾಮಾ... ಇದೊಂದು ಪಕ್ಕಾ ವ್ಯಾಪಾರ. ಇಂಗ್ಲಿಷಿನಲ್ಲಿ ಇದಕ್ಕೆ 'ಬಿಜ್ನೆಸ್' ಎಂದು ಕರೆಯುತ್ತಾರೆ. ನೀನು ನಿಮ್ಮವರಿಗೆ ಇಮಾಜುಗಳನ್ನು ಮಾಡುವುದು, ಮತ್ತು ನಮಗೆ ಮೂರ್ತಿಗಳನ್ನು ಮಾಡುವುದು ಕೇವಲ ಒಂದು ಬಿಜಿನೆಸ್ಸು ಅಷ್ಟೇ! ನಾನು ಅಕ್ಕಿ, ಬೇಳೆ, ತರಕಾರಿ ಮತ್ತಿತರ ಸಂಬಾರಗಳನ್ನು ಮಾರಿದಂತೆ ನೀನೂ ದೇವರುಗಳನ್ನು ಸಂತರನ್ನು ಮಾರಿ ಹೊಟ್ಟೆ ಹೊರೆದುಕೊಳ್ಳುತ್ತಿದ್ದೀಯ... ಈ ಮೂರ್ತಿಗಳನ್ನು ಯಾರಿಗೆ, ಹೇಗೆ, ಎಲ್ಲಿ ಮಾರಬೇಕೆನ್ನುವುದನ್ನು ನನಗೆ ಬಿಡು. ಜನರಲ್ಲಿರುವ ದೇವರ ಭಯ, ಬೂಟಾಟಿಕೆಯ ಭಕ್ತಿಯನ್ನು ಮೇಳೈಸಿದರೆ ನಮ್ಮ ವ್ಯಾಪಾರ ಕ್ಲಿಕ್ಕಾಗುವುದರಲ್ಲಿ ಯಾವ ಸಂಶಯವೂ ಇಲ್ಲ! ನಿನಗೂ ರೊಕ್ಕ, ನನಗೂ ರೊಕ್ಕ... ಏನಂತೀಯಾ?'' ಎಂದು ನಗೆಯಾಡುತ್ತಾ ಸುಧಾಕರ ಗಣೇಶನ ಪಟ ತರಲು ಅಂಗಡಿಯ ಕಡೆಗೆ ಬೈಕಿನಲ್ಲಿ ದೌಡಾಯಿಸಿದ.

★★★

ಈ ಬಾರಿ ಬವ್ತೀಸನನ್ನು ಧರ್ಮಗುರುಗಳು ಇಗರ್ಜಿಯ ಸಲಹಾ ಸಮಿತಿಯ ಉಪಾಧ್ಯಕ್ಷನ ಮೂಲಕ ತಮ್ಮ ಬಳಿಗೆ ಕರೆಸಿಕೊಂಡಿದ್ದರು. ನಡು ಮಧ್ಯಾಹ್ನದಷ್ಟೊತ್ತಿಗೆ ಬವ್ತೀಸ ಧರ್ಮಗುರುಗಳ